ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ
ನವನಗರ, ಹುಬ್ಬಳ್ಳಿ – 580025
ದೂರವಾಣಿ ಸಂಖ್ಯೆ : 0836–2222392, ಫ್ಯಾಕ್ಸ್ : 0836–2223392

ಸಂಖ್ಯೆ: ಕರಾಕಾವಿ/ಆಡಳಿತ/2016–17/ -0670 ದಿನಾಂಕ: 15-07–2016

## ಅಧಿಸೂಚನೆ

**ವಿಷಯ :** ವಿಶ್ವವಿದ್ಯಾಲಯದ ಖರೀದಿ ಮತ್ತು ಟೆಂಡರ್ ಸಮಿತಿ (Purchase and Tender Committee) ರಚನೆ ಮಾಡುವ ಕುರಿತು.

**ಉಲ್ಲೇಖ :** 1. ದಿನಾಂಕ : 31–5–2016ರಂದು ಜರುಗಿದ 51ನೇ ಸಿಂಡಿಕೇಟ್ ಸಭೆಯ ನಡುವಳಿ (ವಿಷಯ ಸಂಖ್ಯೆ: 29)

2. ಮಾನ್ಯ ಕುಲಪತಿಗಳ ಪತ್ರದ ಸಂಖ್ಯೆ : KSLU/VCS/2016-17 ದಿನಾಂಕ : 11–7–2016.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಅಧಿನಿಯಮ–2009ರ ಕಲಂ 43 ರನ್ವಯ ವಿಶ್ವವಿದ್ಯಾಲಯದ ಖರೀದಿ ಮತ್ತು ಟೆಂಡರ್‌ಗಳಿಗೆ ಸಂಬಂಧಿಸಿದ ಕಾರ್ಯಕಲಾಪಗಳನ್ನು ನಿರ್ವಹಿಸಲು **ಖರೀದಿ ಮತ್ತು ಟೆಂಡರ್ ಸಮಿತಿ (Purchase and Tender Committee)**ಯನ್ನು ಪುನರ್‌ರಚಿಸಲು ದಿನಾಂಕ : 31–5–2016ರಂದು ಜರುಗಿದ 51ನೇ ಸಿಂಡಿಕೇಟ್ ಸಭೆಯು ಉಲ್ಲೇಖ 1ರಡಿ ನಮೂದಿಸಿದ ನಡುವಳಿಯಲ್ಲಿ ಅನುಮೋದನೆಯನ್ನು ಪಡೆದುಕೊಳ್ಳಲಾಗಿದೆ. ಸದರ ಸಮಿತಿಗೆ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರನ್ನು ಗೊತ್ತುಮಾಡಲು ಮಾನ್ಯ ಕುಲಪತಿಗಳಿಗೆ ಸಿಂಡಿಕೇಟ್ ಸೂಚಿಸಿದಂತೆ, ಮಾನ್ಯ ಕುಲಪತಿಗಳು ಉಲ್ಲೇಖ 2ರಡಿ ನಮೂದಿಸಿದ ತಮ್ಮ ಪತ್ರದಲ್ಲಿ ಸದಸ್ಯರುಗಳ ಹೆಸರನ್ನು ನಮೂದಿಸಿರುತ್ತಾರೆ. ಕಾರಣ ಆ ಮೇರೆಗೆ **ಖರೀದಿ ಮತ್ತು ಟೆಂಡರ್ ಸಮಿತಿ (Purchase and Tender Committee)**ಯನ್ನು ಈ ಕೆಳಗಿನಂತೆ ಪುನರ್‌ರಚಿಸಿದೆ.

### ಖರೀದಿ ಮತ್ತು ಟೆಂಡರ್ ಸಮಿತಿ (Purchase and Tender Committee)

| ಅ.ನಂ. | ಹೆಸರು | ಪದನಾಮ |
|---|---|---|
| 1. | ಕುಲಪತಿಗಳು | ಅಧ್ಯಕ್ಷರು |
| 2. | ಡಾ. ಶಂಭುಲಿಂಗಪ್ಪ ವೀರಪ್ಪ ಹೆಗಡಾಳ, ಸಿಂಡಿಕೇಟ್ ಸದಸ್ಯರು | ಸದಸ್ಯರು |
| 3. | ಡಾ. ದೇಗಾ ಪ್ರತಿಮಾ (ಪ್ರಶಿಕ್ಷಣ ಪರಿಷತ್ ಸಮಿತಿಯ ನಾಮನಿರ್ದೇಶಿತ ಸದಸ್ಯರು) | ಸದಸ್ಯರು |
| 4. | ಹಣಕಾಸು ಅಧಿಕಾರಿಗಳು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ | ಸದಸ್ಯರು |

18/7/16

| | | |
|---|---|---|
| 5. | ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಸದರ ಸಮಿತಿಯು ಈ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುವುದು ಹಾಗೂ ಸಮಿತಿಯ ಕಾರ್ಯಾವಧಿಯು ಸಿಂಡಿಕೇಟ್ ಸಮಿತಿಯ ಕಾರ್ಯಾವಧಿಗೆ ಸಮಾನಾಂತರವಾಗಿರುತ್ತದೆ.

ತಮ್ಮ ವಿಶ್ವಾಸಿ,

14/07/16

ಕುಲಸಚಿವರು

ಗೆ,

ಖರೀದಿ ಮತ್ತು ಟೆಂಡರ್ ಸಮಿತಿ (**Purchase and Tender Committee**)
ಸಮಿತಿಯ ಎಲ್ಲ ಸದಸ್ಯರಿಗೆ

ಪ್ರತಿಯನ್ನು,

1. ವಿಶ್ವವಿದ್ಯಾಲಯದ ಎಲ್ಲ ವಿಭಾಗದ ಮುಖ್ಯಸ್ಥರುಗಳಿಗೆ.
2. ಮುಖ್ಯಸ್ಥರು, ಐ.ಸಿ.ಟಿ. ವಿಭಾಗ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ ಇವರ ಮಾಹಿತಿಗಾಗಿ ಹಾಗೂ ವಿಷಯವನ್ನು ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಅಳವಡಿಸಲು.
3. ಆಪ್ತಕಾರ್ಯದರ್ಶಿಗಳು, ಮಾನ್ಯ ಕುಲಪತಿಗಳ ಕಾರ್ಯಾಲಯ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ.
4. ಆಪ್ತಕಾರ್ಯದರ್ಶಿಗಳು, ಮಾನ್ಯ ಕುಲಸಚಿವರ ಕಾರ್ಯಾಲಯ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ.